ಮಾಡಿದ್ದೆವು ಅದು ಕಡಿಮೆಯಾಗುತ್ತಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ ಈಗ ಹೊಸ ಯೋಜನೆ ಸಿದ್ಧವಾಗಿದೆ ; ಯೋಜನೆಯು ಬೆಲೆ ನೋಡಿದರೆ ತುಂಬಾ ಜಾಸ್ತಿಯಾಗಿದೆ. ಈಗ ಅದು ಸುಮಾರು ೧೦೬ ಲಕ್ಷ ರೂಪಾಯಿಗಳು ಆಗುತ್ತದೆ. ೨೦ ಕಿಲೋಮೀಟರ್ ದೂರದಲ್ಲಿರುವ ಮಲಪ್ರಭಾ ನಾಲೆಯಿಂದ ನೀರನ್ನು ತರಬೇಕಾಗುತ್ತದೆ. ಹಾಲಿ ಇರುವಂಥ ಯೋಜನೆ ಜೊತೆಗೆ ೪ ಕಿಲೋಮೀಟರ್ ದೂರದಲ್ಲಿರುವ ಮಾಳಗಿ ಹಳ್ಳದಿಂದ ನೀರು ತರುವಂಥ ಯೋಜನೆ ಕಾರ್ಯಗತ ಮಾಡಿದರೆ ಸಧ್ಯದ ಪರಿಸ್ಥಿತಿ ಉತ್ತಮವಾಗುತ್ತದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಸ್ವಾಮಿ, ಮಂತ್ರಿಯವರ ಉತ್ತರದಿಂದಲೇ ಅಲ್ಲಿ ತೊಂದರೆ ಇದೆ ಎನ್ನುವುದು ಗೊತ್ತಾಗುತ್ತದೆ. ಬಾದಾಮಿ ತಾಲ್ಲೂಕು ಕೇಂದ್ರ ಪುರಸಭೆಯು ವ್ಯಾಪ್ತಿಯಲ್ಲಿರುವ ನಗರವಾಸಿಗಳಿಗೆ ಕುಡಿಯುವ ನೀರಿನ ತೊಂದರೆ ಯಾವಾಗಲೂ ಇದ್ದೇ ಇರುತ್ತದೆ. ಜೊತೆಗೆ ಅದು ಬರಗಾಲ ಪ್ರದೇಶವೂ ಆಗಿರುವುದರಿಂದ ಮಾಳಗಿ ಹಳ್ಳದಿಂದ ತರುವ ನೀರಿನ ಕೆಲಸವನ್ನು ಇದೇ ವರ್ಷದಲ್ಲಿಯೇ ಮುಗಿಸಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ನಾವು ಆ ಕಾರ್ಯಕ್ರಮ ಹಾಕಬೇಕಾದರೆ ಪುರಸಭೆಯವರು ೧೮ಲಕ್ಷ ವಂತಿಗೆ ಕೊಡಬೇಕಾಗುತ್ತದೆ. ಮೊದಲನೆಯ ಕಂತಾಗಿ ೧.೮ಲಕ್ಷ ರೂಪಾಯಿಗಳನ್ನು ಅವರು ಕಟ್ಟಿದರೆ ಈ ಯೋಜನೆಯನ್ನು ಪರಿಶೀಲನೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮ್ಯಾಚಿಂಗ್ ಗ್ರಾಂಟ್‌ನಲ್ಲಿ ಅಡ್ಜಸ್ಟ್ ಮಾಡಿ, ನೀರಂ ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಪರಿಶೀಲನೆ ಮಾಡುತ್ತೇನೆ.

ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆ

೧೦೬೪ ಶ್ರೀ ಪತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಸಹಕಾರ ಮಂತ್ರಿಗಳಂ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಕ್ಷಿಣ ಕನ್ನಡ ಜಿಲ್ಲಾ ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆಗೆ ಬೇಕಾಗುವ ಕಬ್ಬನ್ನು ಮುಂಜೂರಾಗಿರುವ ಸಿಬ್ಬಂದಿ ವರ್ಗಗಳ ಸಂಖ್ಯಾ ಬಲವೆಷ್ಟು ? (ದರ್ಜೆವಾರು ವಿವರಗಳನ್ನು ಕೊಡುವುದು)

ಆ. ಈಗ ಇರುವ ಸಿಬ್ಬಂದಿ ವರ್ಗಗಳ ಸಂಖ್ಯಾ ಬಲವೆಷ್ಟು ! (ವಿವರಗಳನ್ನು ಕೊಡುವುದು)

ಇ. ಸದರಿ ಕಾರ್ಖಾನೆಗೆ ಸಿಬ್ಬಂದಿ ನೇಮಕಾತಿ ಮಾಡುವಾಗ ಯಾವ ಆಧಾರದ ಮೇಲೆ ನೇಮಕ ಮಾಡಲಾಗುವುದು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು):—

ಅ. ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆ' ಬ್ರಹ್ಮಾವರ ತನ್ನ ಕಬ್ಬು ಸುರಿಯುವ ಕಾರ್ಯ ಪ್ರಾರಂಭವಾದ ಮೇಲೆ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಮಹಾ ಮಂಡಳಿಯವರು ತಯಾರಿಸಿರುವ ಸಿಬ್ಬಂದಿ ನೇಮಕಾತಿಯ ಸೆಲಹೆಯಂತೆ ದಿನ ಒಂದಕ್ಕೆ ೧೨೫೦ ಟನ್ ಕಬ್ಬು ಸುರಿಯುವ ಸಾಮರ್ಥ್ಯ ಹೊಂದಿರುವ ಕಾರ್ಖಾನೆಗೆ ೫೭೫ ನೌಕರರು ಬೇಕಾಗುತ್ತದೆ. ಅದರಲ್ಲಿ ೨೪೨ ಕಾಯಂ ನೌಕರರು ಹಾಗೂ ೩೩೩ ತಾತ್ಕಾಲಿಕ ನೌಕರರು ಇರುತ್ತಾರೆ. ಈ ವೈಕ ಸಕ್ಕರೆ ನಿರ್ದೇಶಕರು ಕಾರ್ಖಾನೆಯ ಕೋರಿಕೆಯ ಮೇರೆಗೆ ೫೭೫ ಜನ ನೌಕರರ ನೇಮಕಾತಿಗೆ ಅನುಮತಿ ನೀಡಿರುತ್ತಾರೆ. ಅದರಂತೆ ದರ್ಜೆವಾರು ಕೆಳಕಂಡಂತಿದೆ.

	ಕ್ರಮ ಸಂಖ್ಯೆ	ದರ್ಜೆವಾರು ನೌಕರರು	ಸಂಖ್ಯೆ
೧	ಮೇಲ್ವಿಚಾರಕರು	ಎ—೨	೨
೨	,,	ಎ—೧	೧೪
೩	,,	ದರ್ಜೆ ಬಿ	೧
೪	,,	ದರ್ಜೆ ಸಿ	೮
೫	ಕಬ್ಬು ಅಭಿವೃದ್ಧಿ ಅಧಿಕಾರಿಗಳು		೧
೬	ನುರಿತ ನೌಕರರು	ದರ್ಜೆ ಎ	೨೯
೭	,,	ದರ್ಜೆ ಬಿ	೧೩
೮	,,	ದರ್ಜೆ ಸಿ	೨೦
೯	ಹೆಚ್ಚಿನ ನುರಿತ ನೌಕರರು	ದರ್ಜೆ ಎ	೧೫
೧೦	ಕಡಿಮೆ ನುರಿತ ನೌಕರರು		೧೯
೧೧	ನುರಿಯದ ನೌಕರರು		೨೧೫
೧೨	ಗುಮಾಸ್ತ ದರ್ಜೆ—೧		೩
೧೩	,, ೨		೫
೧೪	,, ೩		೨೨
೧೫	,, ೪		೮
೧೬	,, ೫		೨೦
			೫೭೫

ಇದಲ್ಲದೆ ಒಬ್ಬ ಮುಖ್ಯ ಕಾರ್ಯಪಾಲಕರನ್ನು ಕಾರ್ಖಾನೆಯಲ್ಲಿ ನೇಮಿಸಿಕೊಂಡಿದ್ದಾರೆ. ಲೇತಿಳಿಸಿದವು ನೌಕರರಲ್ಲಿ ಬೇರೆ ಇಲಾಖೆಯಿಂದ ಎರವಲು ಸೇವೆ ಮೇಲೆ ಬಂದವರು ಸೇರುವುದಿಲ್ಲ.

ಕಾರ್ಖಾನೆಯು ಹಾಲಿ ನೇಮಿಸಿಕೊಂಡಿರುವ ಸಿಬ್ಬಂದಿಯ ವಿವರ ಕೆಳಕಂಡಂತಿದೆ :

	ಕ್ರಮ ಸಂಖ್ಯೆ	ದರ್ಜೆವಾರು ನೌಕರರು	ಖಾಯಂ	ತಾತ್ಕಾಲಿಕ
೧	ಮೇಲ್ವಿಚಾರಕರು	ಎ—೨	—	೧
೨	,,	ಎ—೧	೫	—
೩	ನುರಿತ ಕೆಲಸಗಾರರು	ದರ್ಜೆ—೩	೨	೨
೪	,,	ದರ್ಜೆ—೫	—	೧
೫	ಕಡಿಮೆ ನುರಿತ ಕೆಲಸಗಾರರು		೧೨	೨
೬	ನುರಿಯದ ಕೆಲಸಗಾರರು		—	೮
೭	ಗುಮಾಸ್ತ	ದರ್ಜೆ—೧	೧	—
೮	,,	೪	೧	೭
೯	ಕೆಲಸದ ತನಿಕಾಧಿಕಾರಿಗಳು		—	೧೭
			೧೭	೩೨

ಇದಲ್ಲದೆ ಒಬ್ಬ ಮುಖ್ಯ ಕಾರ್ಯನಿರ್ವಾಹಕ (ಇಂಜಿನಿಯರ್)ರನ್ನು ಕಾರ್ಖಾನೆಯು ನೇಮಿಸಿಕೊಂಡಿದೆ. ಮೇಲ್ಕಾಣಿಸಿದ ನೌಕರರಲ್ಲಿ ೩೨ ಮಂದಿಯನ್ನು ದಿನಗೂಲಿಯ ಮೇಲೆ ತಾತ್ಕಾಲಿಕವಾಗಿ ನೇಮಿಸಿಕೊಳ್ಳಲಾಗಿದೆ ಮತ್ತು ೧೭ ಜನ ಕಾಯಂ ನೌಕರರನ್ನು ನೇಮಿಸಿಕೊಳ್ಳಲಾಗಿದೆ. ಇದಲ್ಲದೆ ಬೇರೆ ಇಲಾಖೆಗಳಿಂದ ಎರವಲು ಸೇವೆಗೆ ಬಂದ ಅಧಿಕಾರಿಗಳ ವಿವರ ಈ ಕೆಳಕಂಡಂತಿದೆ :

೧	ಕಾರ್ಯ ನಿರ್ವಾಹಕರು	—೧	(ಉಪ ನಿಬಂಧಕರು ಸಹಕಾರ ಇಲಾಖೆ)
೨	ಕಾರ್ಯದರ್ಶಿಗಳು	—೧	(ಸಹಾಯಕ ನಿಬಂಧಕರು, ಸಹಕಾರ ಇಲಾಖೆ)
೩	ಲೆಕ್ಕಾಧಿಕಾರಿಗಳು	—೧	(ಸಹಕಾರ ಇಲಾಖೆ)
೪	ಸಹಾಯಕ ಎಕ್ಸೆಕ್ಯೂಟಿವ್ ಇಂಜಿನಿಯರ್	—೧	(ಲೋಕೋಪಯೋಗಿ ಇಲಾಖೆ)
೫	ಸಹಾಯಕ ಎಂಜಿನಿಯರ್	—೧	
೬	ಸಹಾಯಕ ಕೃಷಿ ಅಧಿಕಾರಿಗಳು	—೨	(ಕೃಷಿ ಇಲಾಖೆ)

೧೬ ಮಂದಿ ಸಿಬ್ಬಂದಿಯನ್ನು ಕಾರ್ಖಾನೆಗೆ ನೇಮಕಾತಿಯು ಸಮಿತಿಯು ಕಾನೂನಿನನುಗುಣವಾಗಿ ರೋಸ್ಟರ್ ಪದ್ಧತಿಯನ್ನು ಅನುಸರಿಸಿ ನೇಮಕ ಮಾಡಲಾಗಿದೆ (ಎರವಲು ಸೇವೆಯವರು ಬಿಟ್ಟು) ಹಾಗೂ ಮುಂದೆ ನೇಮಕಾತಿ ಸಮಿತಿಯು ನೌಕರರನ್ನು ನೇಮಿಸಿಕೊಳ್ಳುವಾಗ ಇದೇ ಪದ್ಧತಿಯನ್ನು ಅನುಸರಿಸಲಾಗುವುದು ಮತ್ತು ನೇಮಕಾತಿ ಸಮಿತಿಯು ಜಾರಿಗೆ ಬರುವುದಕ್ಕೆ ಮುಂಚೆ ಒಬ್ಬ ನೌಕರರನ್ನು ಕಾರ್ಖಾನೆಯ ಕಾರ್ಯಕಾರಿ ಸಮಿತಿ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ನೇಮಿಸಿಕೊಂಡಿದೆ.

ಶ್ರೀ ಪ್ರತಾಪ ಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ೧೯ ಜನ ಖಾಯಂ ನೌಕರರನ್ನು, ಮತ್ತು ೩೨ ಜನ ನೌಕರರನ್ನು ತಾತ್ಕಾಲಿಕವಾಗಿ ಎಂದಿನಿಂದ ನೇಮಿಸಿಕೊಳ್ಳಲಾಯಿತು ? ಕಬ್ಬು ಅರೆಯುವ ಕಾರ್ಯ ಯಾವಾಗಿನಿಂದ ಪ್ರಾರಂಭವಾಗಿದೆ ?

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಆ ವಿವರಗಳು ನನ್ನ ಹತ್ತಿರ ಇಲ್ಲ. ಕಬ್ಬನ್ನು ಅರೆಯುವ ಕಾರ್ಯ ಮಾರ್ಚ್ ಕಡೆಯಲ್ಲಿ ಅಥವಾ ಏಪ್ರಿಲ್ ೧ನೇ–೨೦ರೊಳಗೆ ಪ್ರಾರಂಭವಾಗುವುದು.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಬ್ರಹ್ಮಾವರ ಸಕ್ಕರೆ ಕಾರ್ಖಾನೆಯ ಕಛೇರಿ ಬ್ರಹ್ಮಾವರದಲ್ಲಿದೆಯೋ ? ಮಂಗಳೂರಿನಲ್ಲಿದೆಯೋ ? ಬೆಂಗಳೂರಿನಲ್ಲಿದೆಯೋ ?

ಶ್ರೀ ಆರ್. ಎಲ್. ಜಾಲಪ್ಪ.—ಸ್ವಾಮಿ, ಸಧ್ಯಕ್ಕೆ ಮಂಗಳೂರಿನಲ್ಲಿದೆ.

ಶ್ರೀ ಬಿ. ಬಿ. ಶೆಟ್ಟಿ.—ಮಂಗಳೂರಿನಿಂದ ಬ್ರಹ್ಮಾವರ ಸುಮಾರು ೭೦ ಕಿಲೋಮೀಟರ್ ದೂರದಲ್ಲಿದೆ. ಇದರಿಂದ ಆ ಭಾಗದ ರೈತರಿಗೆ ಹೆಚ್ಚಿನ ತೊಂದರೆಯಾಗಿದೆ. ೪ ತಿಂಗಳ ಹಿಂದೆಯೇ ಮಂಗಳೂರಿನಿಂದ ಆಫೀಸು ಬದಲಾಯಿಸುವ ಮಾತು ಕೇಳಿ ಬಂದರೂ ಇನ್ನು ಕಾರ್ಯಗತ ಮಾಡಿಲ್ಲ. ಇದು ಬಹಳ ಬೇಸರದ ಸಂಗತಿಯಾಗಿದೆ. ಅಲ್ಲಿ ಇರತಕ್ಕ ಕೆಲವು ಇಂಜಿನಿಯರುಗಳು ತಮ್ಮ ಸ್ವೇಚ್ಛಾವೃತ್ತಿಯಿಂದ ಟೆಂಡರ್ ಕರೆಯದೇ ಮಿಷಿ ಬಂದವರಿಗೆ ಕೆಲಸಗಳನ್ನು ಕೊಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಮಂಗಳೂರಿನ ಜಿಲ್ಲಾಧಿಕಾರಿಗಳನ್ನೇ, ಆ ಕಾರ್ಖಾನೆಯ ಛೇರ್ಮನ್ ಆಗಿ ನೇಮಿಸಿದ್ದೇವೆ. ಅಲ್ಲಿ ಅವ್ಯವಹಾರಗಳು ನಡೆದಿದೆಯೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ಅದು ನನ್ನ ಗಮನಕ್ಕೆ ಬಂದಿರಲಿಲ್ಲ ಬಂದಿದ್ದರೆ ಇಷ್ಟು ಹೊತ್ತಿಗೆ ಕ್ರಮ ಕೈಗೊಳ್ಳುತ್ತಿದ್ದೆ. ನಾನು ಇವತ್ತಿನ ದಿವಸ ಮಂಗಳೂರಿನ ಜಿಲ್ಲಾಧಿಕಾರಿಗಳನ್ನು ಫೋನ್ ಮುಖಾಂತರ ಮಾತನಾಡಿ ಅಲ್ಲಿ ಏನು ಅವ್ಯವಹಾರವಾಗಿದೆಯೆಂದು ಹೇಳುತ್ತಿದ್ದೀರಿ ಅದರ ಬಗ್ಗೆ ತಕ್ಷಣವೇ ಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತೇನೆ. ಎರಡನೆಯದಾಗಿ ನಾನು ಅಲ್ಲಿಗೆ ಹೋಗಿದ್ದಾಗ ೮ ದಿವಸಗಳಲ್ಲಿ ಆಫೀಸ್‌ನ್ನು ಶಿಫ್ಟ್ ಮಾಡಬೇಕೆಂದು ಹೇಳಿದ್ದೆ, ಆದು ಕೂಡ ಆಗಿಲ್ಲವೆಂದು ಹೇಳುತ್ತಿದ್ದಾರೆ ಅದನ್ನು ಸಹ ಜಿಲ್ಲಾಧಿಕಾರಿಗಳವರಿಗೆ ತಿಳಿಸಿ ಸರಿಯಾದ ಸೂಚನೆ ನೀಡುತ್ತೇನೆ.